**ಪಾಠ–6** **ಜುಲೈ 31–ಆಗಸ್ಟ್ 6**

# ಕೌಟುಂಬಿಕ ಸಂಬಂಧಗಳಲ್ಲಿ ವಿಶ್ರಾಂತಿ ಕಾಣುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆ.ಕಾಂಡ 34, ಇಬ್ರಿಯ 11:17–22, ಧ.ಕಾಂಡ 4:29, 1 ಯೋಹಾನ 3:1,2, ಆ.ಕಾಂಡ 39, ಎಫೆಸ 6:1–13.

**ಸ್ಮರಣವಾಕ್ಯ : "ಆದಕಾರಣ ಪ್ರಿಯರೇ, ನೀವು ಈ ಸಂಗತಿಗಳನ್ನು ಮುಂದಾಗಿ ತಿಳಿದುಕೊಂಡಿರುವುದರಿಂದ ಅಧರ್ಮಿಗಳ ಭ್ರಾಂತಿಯ ಸೆಳವಿಗೆ ಸಿಕ್ಕಿಕೊಂಡು ನಮ್ಮ ಸ್ಥಿರ ಮನಸ್ಸನ್ನು ಬಿಟ್ಟು ಭ್ರಷ್ಟರಾಗದಂತೆ ಎಚ್ಚರಿಕೆಯಾಗಿರಿ. ನೀವು ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿ ಹೊಂದುತ್ತಾ ಇರ್ರಿ. ಆತನಿಗೆ ಈಗಲೂ ಸದಾಕಾಲವು ಸ್ತೋತ್ರ ಆಮೆನ್"** (2 ಪೇತ್ರ 3:17,18).

ತರುಣ ಹುಡುಗನು ದಿಗಂತವನ್ನು ಬಹಳ ಎಚ್ಚರಿಕೆಯಿಂದ ದಿಟ್ಟಿಸಿ ನೋಡಿದನು. ನಂತರ ಕಡೆಯಲ್ಲಿ ತಮ್ಮವರನ್ನು ಕಂಡನು. ಆತನು ತನ್ನ ಅಣ್ಣಂದಿರಿಗಾಗಿ ಕೆಲವು ದಿನಗಳಿಂದ ಹುಡುಕುತ್ತಿದ್ದನು. ಆತನು ಅವರನ್ನು ಸಮೀಪಿಸುತ್ತಿದ್ದಂತೆಯೇ ಅವರ ಕಡೆ ಕೈಬೀಸಿ ಕರೆಯುತ್ತಾ ಮುಖದಲ್ಲಿ ದ್ವೇಷ ತುಂಬಿಕೊಂಡ ಆ ಗುಂಪಿಗೆ ಹೋದಾಗ ಅವನಿಗೆ ಯಾವ ಸ್ವಾಗತವೂ ಅವರಿಂದ ಸಿಗಲಿಲ್ಲ. ಆತನ ಸ್ವಂತ ಅಣ್ಣಂದಿರೇ ಅವನನ್ನು ಕೊಲೆ ಮಾಡಲು ಉದ್ದೇಶಿಸಿದ್ದರು. ರೂಬೇನ್ ಇಲ್ಲದೆ ಹೋಗಿದ್ದರೆ ಮುಂದೆ ಹೇಳುವುದಕ್ಕೆ ಕಥೆಯೇ ಇರುತ್ತಿರಲಿಲ್ಲ. ರೂಬೇನನು ಅವನ ಪ್ರಾಣವನ್ನು

* ಆಗಸ್ಟ್ 7ನೇ ಸಬ್ಬತ್ತಿನ ಸಿದ್ಧತೆಗಾಗಿ ಈ ವಾರದ ಪಾಠ ಅಧ್ಯಯನ ಮಾಡಿರಿ.

ತೆಗೆಯಬಾರದು ಎಂದು ಹೇಳಿ ಅವನನ್ನು ಅವರ ಕೈಯಿಂದ ತಪ್ಪಿಸಿದನು ಮತ್ತು ಅವನನ್ನು ಕಾಡಿನಲ್ಲಿ ಬಂದು ಗುಂಡಿಗೆ ಹಾಕೋಣ ಎಂದು ತನ್ನ ತಮ್ಮಂದಿರನ್ನು ಒಪ್ಪಿಸಿದನು. ನಂತರ ಯಹೂದನು ಆತನನ್ನು ಮಾರಿ ಸ್ವಲ್ಪ ಹಣ ಮಾಡಿಕೊಳ್ಳುವ ತಂತ್ರೋಪಾಯ ಮಾಡಿದನು. ಆ ಮಾರ್ಗವಾಗಿ ಸಾಗಿಹೋಗುವ ಗುಲಾಮರ ವ್ಯಾಪಾರಿಗಳಿಗೆ ಮಾರಿದರು.

ಕೆಟ್ಟು ಹೋದ ಕುಟುಂಬದ ಸಂಬಂಧಗಳಿಗೆ ಇದು ಎಂಥಾ ಉದಾಹರಣೆಯಲ್ಲವೇ?

ನಾವು ನಮ್ಮ ಜೀವನದಲ್ಲಿ ಎಷ್ಟೋ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಆದರೆ ಕುಟುಂಬವನ್ನು ಆರಿಸಿಕೊಳ್ಳಲಾರೆವು. ಯಾರೂ ಪರಿಪೂರ್ಣರಲ್ಲ, ನಮ್ಮಲ್ಲಿ ಪರಿಪೂರ್ಣವಾದ ಕುಟುಂಬ ಮತ್ತು ಪರಿಪೂರ್ಣವಾದ ಸಂಬಂಧಗಳು ಯಾರಿಗೂ ಇಲ್ಲ. ನಮ್ಮಲ್ಲಿ ಕೆಲವರಿಗೆ ತಂದೆ ತಾಯಿ, ಅಣ್ಣತಮ್ಮಂದಿರು ಮತ್ತು ಇತರೆ ಸದಸ್ಯರು ಎಲ್ಲರೂ ದೇವರ ಪ್ರೀತಿಯನ್ನು ಫಲಿಸುವ ಕುಟುಂಬವಿರುತ್ತದೆ, ಆದರೆ ಬಹಳ ಸಲ ಕಡಿಮೆ ಆದರ್ಶವುಳ್ಳ ಕುಟುಂಬಗಳೇ ನಮ್ಮ ಪಾಲಿಗಿರುತ್ತವೆ.

ಕುಟುಂಬ ಸಂಬಂಧಗಳು ಯಾವಾಗಲೂ ಸಂಕೀರ್ಣವಾದವುಗಳು ಮತ್ತು ನೋವು ತರುವಂಥವು, ನಮ್ಮ ನೆಮ್ಮದಿಯನ್ನು ಕೆಡಿಸುತ್ತವೆ, ಮನಸ್ಸಿಗೆ ಗಾಸಿ ಉಂಟುಮಾಡುತ್ತವೆ, ನಮ್ಮ ಭಾವನೆಗಳ ಹೊರೆಯನ್ನು ಹೊತ್ತುಕೊಂಡು ಅನೇಕ ಸಲ ಮತ್ತೊಬ್ಬರ ಮೇಲೆ ಹೊರಿಸಿ ಬಿಡುತ್ತೇವೆ.

ಈ ಸಂಬಂಧಗಳಲ್ಲಿ ದೇವರು ಕೊಡುವ ವಿಶ್ರಾಂತಿಯನ್ನು ನಮ್ಮ ಜೀವಿತಗಳಲ್ಲಿ ಹೇಗೆ ಕಂಡುಕೊಳ್ಳಬಹುದು? ಈ ವಾರ ನಾವು ಯೋಸೇಪನ ಮತ್ತು ಆತನ ಕುಟುಂಬದ ಸಂಬಂಧಗಳ ಕಥೆಯಿಂದ ದೇವರು ಹೇಗೆ ಇಂತಹ ಸಮಸ್ಯೆಗಳಿಗೆ ಪರಿಹಾರ ಕೊಡುತ್ತಾನೆ, ಸರಿಪಡಿಸುತ್ತಾನೆ ಎಂಬುದನ್ನು ಕಲಿಯುತ್ತೇವೆ.

**ಭಾನುವಾರ** **ಆಗಸ್ಟ್ 1**

## ಸಮಸ್ಯೆ ತುಂಬಿದ ಮನೆ (ಕುಟುಂಬ)

ಸಮಸ್ಯೆ ತುಂಬಿದ ಮನೆಗಳ ಬಗ್ಗೆ ಯೋಸೇಪನಿಗೆ ಗೊತ್ತಿತ್ತು. ಇದೆಲ್ಲಾ ಆತನ ಮುತ್ತಾತ ಅಬ್ರಹಾಮ ಮತ್ತು ಮುತ್ತಜ್ಜಿ ಸಾರಳು ಕಾರಣರಾಗಿದ್ದರು. ತಾನು ಮಕ್ಕಳನ್ನು

ಹೆರಲಾರದ ಬಂಜೆ ಎಂದು ತಿಳಿದು ತನ್ನ ಯಜಮಾನನಾದ ಅಬ್ರಹಾಮನು ತನ್ನ ದಾಸಿಯಾದ ಹಾಗರಳ ಹತ್ತಿರ ಹೋಗುವಂತೆ ಒಪ್ಪಿಸಿದಳು. ಹಾಗರಳು ಗರ್ಭಿಣಿಯಾದಾಗ ಸಮಸ್ಯೆ ಪ್ರಾರಂಭವಾಗುತ್ತದೆ. ಇಂತಹ ವಾತಾವರಣದಲ್ಲಿ ಬೆಳೆದ ಇಸಾಕ ಮತ್ತು ಇಷ್ಮಾಯೇಲ್ಯರು ತಮ್ಮ ಕುಟುಂಬಗಳಿಗೆ ಒತ್ತಡವನ್ನು ತಂದುಕೊಂಡರು. ಇಸಾಕನಿಗೆ ತನ್ನ ಹಿರಿಯ ಮಗ ಏಸಾವನ ಮೇಲೆ ಹೆಚ್ಚು ಪ್ರೀತಿ, ಯಾಕೋಬನು ತನ್ನ ತಂದೆಯನ್ನು ಮೆಚ್ಚಿಸಲು ಎಣಗುವುದು. ನಂತರ ಯಾಕೋಬನು ಇಬ್ಬರು ಅಕ್ಕ–ತಂಗಿಯರನ್ನು ಮದುವೆ ಮಾಡಿಕೊಳ್ಳುವ ಮೋಸಕ್ಕೊಳಗಾದನು. ಹೆಂಡತಿಯರಿಬ್ಬರು ಒಂದಾಗಿ ಹೋಗಲಾರದೆ ಹೋದರು ಇಬ್ಬರಿಗೂ ಮಕ್ಕಳೆರುವ ಸ್ಪರ್ಧೆಯಾಯ್ತು ಅದಕ್ಕಾಗಿ ತಮ್ಮ ದಾಸಿಯರೂ ಯಾಕೋಬನಿಗೆ ಮಕ್ಕಳನ್ನು ಹೆರುವಂತೆ ಮಾಡಿದರು.

ಆದಿಕಾಂಡ 34ನೇ ಅಧ್ಯಾಯದಲ್ಲಿರುವ ಪ್ರಸಂಗವನ್ನು ಅವಲೋಕನ ಮಾಡಿರಿ. ಯೋಸೇಪನ ಮೇಲೆ ಮತ್ತು ಇಡೀ ಕುಟುಂಬದ ಮೇಲೆ ಈ ಪ್ರಸಂಗವು ಎಂತಹ ಭಾವನಾತ್ಮಕ ಮತ್ತು ಸಂಬಂಧಿಕ ಸಮಸ್ಯೆಯನ್ನು ತಂದಿತು?

**ಸೋಮವಾರ** **ಆಗಸ್ಟ್ 2**

## ಹೊಸ ದಿಕ್ಕನ್ನು ಆಯ್ದುಕೊಳ್ಳುವುದು

ಯೋಸೇಪನು ತನ್ನ ನೋವು ಸಂಬಂಧಗಳ ಜಟಿಲತೆ, ಆತಂಕ ಎಲ್ಲವನ್ನೂ ಐಗುಪ್ತಕ್ಕೆ ತೆಗೆದುಕೊಂಡು ಪ್ರಯಾಣ ಮಾಡಿದನು. ಅಲ್ಲಿ ಆತನು ಗುಲಾಮನಾಗಿ ಮಾರಲ್ಪಟ್ಟನು. ಇದು ವಿಶ್ರಾಂತಿಕರವಾದ ಪ್ರವಾಸವಾಗಿರದೆ ಕಣ್ಣೀರಿನ ಪ್ರವಾಸವಾಗಿತ್ತು.

ಈವಾಗ ಯೋಸೇಪನು ತನ್ನನ್ನು ಗುಲಾಮನನ್ನಾಗಿ ಕೊಂಡುಕೊಂಡ ವ್ಯಾಪಾರಿಗಳ ಜೊತೆಗೆ ಐಗುಪ್ತದೇಶಕ್ಕೆ ಹೋಗುತ್ತಿದ್ದನು. ಹುಡುಗ ಯೋಸೇಪನು ಅವರು ಕಾನಾನಿನ ಗಡಿದಾಟಿ ದಕ್ಷಿಣ ದಿಕ್ಕಿಗೆ ತಿರುಗಿ ಪ್ರಯಾಣ ಮಾಡುವಾಗ ದೂರದಲ್ಲಿ ಬೆಟ್ಟಗಳ ಹಿಂದೆ ತನ್ನ ತಂದೆಯ ಗುಡಾರಗಳು ಅವನ ನೆನಪಿಗೆ ಬಂದವು. ಬಹಳ ದುಃಖದಿಂದ ಒಬ್ಬನೇ ತನ್ನ ತಂದೆಯ ಪ್ರೀತಿವಾತ್ಸಲ್ಯಗಳನ್ನು ನೆನಸಿಕೊಂಡು ಅತ್ತನು. ಮತ್ತೆ ದಾತಾನಿನ ದೃಶ್ಯವು ಅವನ ಮುಂದೆ ಸುಳಿಯಿತು. ಆತನು ತನ್ನ ಹೊಟ್ಟೆಕಿಚ್ಚಿನ ಅಣ್ಣಂದಿರು ತನ್ನನ್ನು ಎಷ್ಟು ದ್ವೇಷದಿಂದ ನೋಡುತ್ತಿದ್ದರು ಎಂಬುದನ್ನು ಭಾವಿಸಿಕೊಂಡನು. ಚುಚ್ಚುವ ಮಾತುಗಳು, ಅವಮಾನದ ಪದಗಳು ಅವನು

ಎಷ್ಟು ಗೋಗರೆದರು ಅವರು ನಿಲ್ಲಿಸಲಿಲ್ಲ. ಈಗಲೂ ಅವನ ಕಿವಿಗಳಲ್ಲಿ ಅವುಗಳೇ ಗುಯ್‌ಗುಡುತ್ತಿದ್ದವು. ಬಹಳ ನಡುಗುವವನಾಗಿ ತನ್ನ ಭವಿಷ್ಯದ ಕಡೆಗೆ ದೃಷ್ಟಿ ಹರಿಸಿದನು. ಆವಾಗ ಸನ್ನಿವೇಶವು ಎಷ್ಟು ಬದಲಾಯಿತು– ಮುದ್ದಾಗಿ ಬೆಳೆದ ಮಗನು ಒಬ್ಬ ಅಸಹಾಯಕನಾದ ತಿರಸ್ಕೃತನಾದ ಗುಲಾಮ! ಜೊತೆಗಾರರಿಲ್ಲದೆ ಏಕಾಂಗಿ, ತನಗೆ ಗೊತ್ತಿಲ್ಲದ ದೇಶಕ್ಕೆ ಹೋಗುತ್ತಿದ್ದೇನೆ ಅಲ್ಲಿ ತನಗೆ ಯಾರು ಗತಿ? ಎಂದು ತಡೆಯಲಾರದ ದುಃಖದಿಂದ ಭಯಪಟ್ಟನು.

ಆಮೇಲೆ ಅವನ ಆಲೋಚನೆ ಅವನ ತಂದೆಯು ಆರಾಧನೆ ಮಾಡುತ್ತಿದ್ದ ದೇವರ ಕಡೆಗೆ ಹರಿಯಿತು. ಚಿಕ್ಕಂದಿನಿಂದ ದೇವರ ಪ್ರೀತಿ, ಭಯಗಳನ್ನು ಕಲಿತಿದ್ದನು. ಬಹಳ ಸಲ ತನ್ನ ತಂದೆ ಯಾಕೋಬನು ಮನೆಯನ್ನು ಬಿಟ್ಟು ಗಡಿಪಾರಾದವನಂತೆ ಅಲೆದುಕೊಂಡು ಹೋಗುವಾಗ ರಾತ್ರಿ ಕಂಡ ದರ್ಶನದ ಬಗ್ಗೆ ಕೇಳುತ್ತಿದ್ದನು.... ಈವಾಗ ಎಲ್ಲಾ ಅಮೂಲ್ಯ ಪಾಠಗಳು ನಿಚ್ಚಳವಾಗಿ ಅವನ ಕಣ್ಣುಮುಂದೆ ಬಂದಿತು. ಯೋಸೇಪನು ತನ್ನ ತಂದೆಯ ದೇವರೇ ತನಗೂ ದೇವರು ಎಂದು ನಂಬಿಕೊಂಡನು. ಆವಾಗ ಅಲ್ಲಿಯೇ ತನ್ನನ್ನು ತಾನು ದೇವರಿಗೆ ಸಮರ್ಪಿಸಿಕೊಂಡನು. ಇಸ್ರಾಯೇಲನನ್ನು ಕಾಯುವಾತನೇ ತನ್ನ ಜೊತೆ ಅನ್ಯದೇಶದಲ್ಲಿರುತ್ತಾನೆಂದು ಪ್ರಾರ್ಥಿಸಿದನು"– ಎಲೆನ್ ಜಿ ವೈಟಮ್ಮನವರ 'ನಮ್ಮ ಪಿತೃಗಳು ಮತ್ತು ಪ್ರವಾದಿಗಳು' ಪುಸ್ತಕದಲ್ಲಿ ಪುಟ 213, 214.

ಕೆಲವು ಸಮುದಾಯಗಳಲ್ಲಿ ವ್ಯಕ್ತಿ ಪ್ರಧಾನವಾಗಿರದೆ ಸಮುದಾಯ ಪ್ರಧಾನವಾಗಿರುತ್ತವೆ. ಇನ್ನು ಕೆಲವು ಸಂಸ್ಕೃತಿಯಲ್ಲಿ ವ್ಯಕ್ತಿಯ ಪಾತ್ರಕ್ಕೆ ಹೆಚ್ಚು ಪ್ರಾಶಸ್ತ್ಯವಿರುತ್ತದೆ. ಇವೆರಡು ಮಧ್ಯೆ ಸರಿಯಾದ ಸಮತೋಲನವನ್ನು ಸತ್ಯವಾಕ್ಯದಲ್ಲಿ ಕಂಡುಕೊಂಡರೆ ಎರಡೂ ದೇವರಿಗೆ ಬದ್ಧವಾಗಿರಬಹುದು. ಯೋಸೇಫನು ತಾನು ದೇವರನ್ನೇ ಅನುಸರಿಸಿ ನಡೆಯುತ್ತೇನೆ ಎಂಬ ತನ್ನ ವೈಯಕ್ತಿಕ ತೀರ್ಮಾನದಿಂದ ವಿಶ್ರಾಂತಿ ಪಡೆಯಲು ಆರಂಭಿಸಿದನು.

ನಿಮ್ಮ ವೈಯಕ್ತಿಕ ಜವಾಬ್ದಾರಿಯ ಬಗ್ಗೆ ಈ ಮುಂದಿನ ವಚನಗಳ ನಮಗೆ ಏನು ಬೋಧಿಸುತ್ತವೆ? (ಧ.ಕಾಂಡ 4:29, ಯೋಹಾನ 24:15, 1 ಪೂ.ವೃ. 16:11, ಕೀರ್ತ 14:2, ಜ್ಞಾ 8:10, ಯೆಶಾಯ 55:6).

ವಿಶ್ರಾಂತಿಯನ್ನು ಹೊಂದಿಕೊಳ್ಳಲು ನಮ್ಮ ಪ್ರತಿಯೊಬ್ಬರೂ ದೇವರನ್ನು ಹಿಂಬಾಲಿಸುವ ವೈಯಕ್ತಿಕ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಪೂರ್ವಕಾಲದ ನಮ್ಮ ಆಧ್ಯಾತ್ಮಿಕ ನಾಯಕರಿಗೂ ಸಹ ನಂಬಿಕೆ ಮತ್ತು ಆಧ್ಯಾತ್ಮಿಕತೆ ಎಂಬುದು ಅವರ ವಂಶವಾಹಿನಿಯಲ್ಲಿ ಹರಿದುಬಂದಿರಲಿಲ್ಲ. ನೆನಪಿಡಿ ದೇವರಿಗೆ ಮಕ್ಕಳಿದ್ದಾರೆಯೆ ಹೊರತು ಮೊಮ್ಮಕ್ಕಳಿಲ್ಲ.

ಯಾಕೆ ಪ್ರತಿದಿನವೂ ಮತ್ತು ಪ್ರತಿದಿನದ ಪ್ರತಿಕ್ಷಣವೂ ನಾವು ನಮ್ಮ ದೇವರಿಗೆ ಒಪ್ಪಿಸಿಕೊಡುವ ತೀರ್ಮಾನ ಮಾಡುವುದು ಬಹಳ ಮುಖ್ಯವಾಗಿದೆ? ಹಾಗೆ ಮಾಡದೆ ಹೋದರೆ ಏನಾಗುತ್ತದೆ?

**ಮಂಗಳವಾರ** **ಆಗಸ್ಟ್ 3**

## ನಿಜವಾದ ಸ್ವಯೋಗ್ಯತೆ ಕಂಡುಕೊಳ್ಳುವುದು

ಯೋಸೇಫನಿಗೆ ಇಷ್ಮಾಯೇಲ್ಯರ ಕೈಯಿಂದ ತಪ್ಪಿಸಿಕೊಂಡು ತನ್ನ ಮನೆಗೆ ಹಿಂದಿರುಗಿ ಹೋಗಬೇಕೆಂಬ ಆಸೆ ಬಂದಿರಲೇಬೇಕು. ಆದರೆ ಆತನು ಐಗುಪ್ತ ದೇಶವನ್ನು ತಲುಪಿ ಒಂದು ದೊಡ್ಡಮನೆಗೆ ಮಾರಲ್ಪಟ್ಟಾಗ ಅವನ ಆಸೆಯೆಲ್ಲ ಒಡೆದು ಚೂರಾಯ್ತು. ಆದಿಕಾಂಡ 39:1ರಲ್ಲಿ ಪೋಟಿಫರನು ಫರೋಹನ ಉದ್ಯೋಗಸ್ಥನೂ ಮೈಗಾವಲಿನವರ ದಳವಾಯಿಯೂ ಯೋಸೇಫನನ್ನು ಇಷ್ಮಾಯೇಲ್ಯರಿಂದ ಕೊಂಡುಕೊಂಡನು. ಕೂಡಲೇ ಅವನು ಪರಿಚಯವಿಲ್ಲದ ಭಾಷೆ ಸಂಸ್ಕೃತಿಗೆ ತಳ್ಳಲ್ಪಟ್ಟನು.

ನಮ್ಮ ಕುಟುಂಬಗಳು ಮತ್ತು ನಿಕಟ ಸಂಬಂಧಗಳು ನಮ್ಮ ಸ್ವವಿಶ್ವಾಸ (ಆತ್ಮಗೌರವ) ಬೆಳೆಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಯೋಸೇಫನು ತಾನು ತಂದೆಯ ಮನೆಯಲ್ಲಿ ಬೆಳೆಯುವಾಗ ತಾನೊಬ್ಬ ವಿಶೇಷನಾದವನು ಎಂಬ ಭಾವನೆ ಬೆಳೆದಿತ್ತು. ಆತನು ಯಾಕೋಬನು ಅತಿಯಾಗಿ ಪ್ರೀತಿಸುತ್ತಿದ್ದ ರಾಹೇಳಲ ಹಿರಿಯ ಮಗನಾಗಿದ್ದನು (ಆ.ಕಾಂಡ 29:18). ಹಾಗಾಗಿ ಆತನು ಖಂಡಿತವಾಗಿಯೂ ತನ್ನ ತಂದೆಯ ಮುದ್ದಿನ ಮಗನಾಗಿದ್ದನು. ಆದುದರಿಂದಲೇ ಅವನಿಗೆ ಮಾತ್ರ ಬಣ್ಣ ಬಣ್ಣದ ನಿಲುವಂಗಿ ಮಾಡಿಸಿಕೊಟ್ಟಿದ್ದನು (ಆ.ಕಾಂಡ 37:3,4).

ಆದರೆ ಈವಾಗ ಅವನ್ಯಾರು? ಒಬ್ಬ ಗುಲಾಮ, ಕೊಂಡುಕೊಳ್ಳಬಹುದಾದ ಮತ್ತು ಮಾರಬಹುದಾದ ಮನುಷ್ಯ ನೋಡಿರಿ ಎಷ್ಟು ತ್ವರಿತವಾಗಿ ಇಡೀ ಸನ್ನಿವೇಶ

ಬದಲಾಯ್ತು. ಈವಾಗ ಅವನ ಜೀವನವು ಮತ್ತೆ ತ್ವರಿತವಾಗಿ ಬದಲಾದಂತಿದೆ. ನೋಡಿರಿ.

ಖಂಡಿತ, ಯೋಸೇಫನು ನಾವೆಲ್ಲರೂ ಕಲಿಯಲೇಬೇಕಾದ ಪಾಠವನ್ನು ಕಲಿತಿದ್ದನು. ನಾವೇನು; ನಮ್ಮ ಯೋಗ್ಯತೆ ಏನು ಎಂಬುದನ್ನು ತಿಳಿದುಕೊಳ್ಳಲು ಮತ್ತೊಬ್ಬರಿಗೆ ಅವಕಾಶ ಕೊಟ್ಟರೆ ನಮಗೆ ನಮ್ಮ ಯೋಗ್ಯತೆ ತಿಳಿಯಲಾರದು. ಇಲ್ಲವೇ ನಮಗೆ ಬಹಳ ಗೊಂದಲವಾಗಬಹುದು. ಯಾಕೆಂದರೆ ಎಲ್ಲರೂ ನಮ್ಮನ್ನು ಪ್ರಶಂಸೆ ಮಾಡಲಾರರು. ಅದರ ಬದಲು ದೇವರು ನಮ್ಮ ಬಗ್ಗೆ ಏನು ಯೋಚಿಸುತ್ತಾನೆ ನಮ್ಮನ್ನು ಹೇಗೆ ಕಾಣುತ್ತಾನೆ ಎಂಬುದು ಮುಖ್ಯ.

ನಮ್ಮಲ್ಲಿ ಪ್ರತಿಯೊಬ್ಬರನ್ನು ದೇವರು ಹೇಗೆ ಕಾಣುತ್ತಾನೆ? (ನೋಡಿರಿ ಯೆಶಾಯ 43:1; ಮಲಾಕೀಯ 3:17, ಯೋಹಾನ 1:12, ಯೋಹಾನ 15:15, ರೋಮ 8:14, 1 ಯೋಹಾನ 3:1,2).

ದೇವರು ನಮ್ಮನ್ನು ಕೃಪೆಯಿಂದ ಲೇಪಿತವಾದ ಗಾಜಿನ ಮೂಲಕ ನೋಡುತ್ತಾನೆ. ಆತನು ನಮ್ಮ ಸಾಮರ್ಥ್ಯ, ಸೌಂದರ್ಯ ಮತ್ತು ಪ್ರತಿಭೆ, ಇವೆಲ್ಲವನ್ನೂ ನೋಡುತ್ತಾನೆ. ಕಡೆಯದಾಗಿ ಆತನೇ ನಮಗೋಸ್ಕರ ನಾವು ಪರಿಪೂರ್ಣತೆ ಹೊಂದಲು ಸಾಯುವುದಕ್ಕೆ ಸಿದ್ಧನಾಗುತ್ತಾನೆ. ನಮ್ಮ ಪಾಪಗಳು ನಮಗೆ ಎಷ್ಟು ದೊಡ್ಡ ಬೆಲೆಯನ್ನು ಕೇಳುತ್ತವೆ ಎಂಬುದರ ಜೊತೆಗೆ ನಾವು ಎಷ್ಟು ಅಮೂಲ್ಯರು ಎಂಬುದನ್ನು ಸಹಾ ಶಿಲುಬೆಯು ತೋರಿಸುತ್ತದೆ. ನಾವು ನಮ್ಮ ಬಗ್ಗೆ ಏನೆಂದುಕೊಳ್ಳುತ್ತೇವೆ ಅಥವಾ ಇತರರು ಏನೆಂದುಕೊಳ್ಳುತ್ತಾರೆ ಎನ್ನುವುದನ್ನು ಪರಿಗಣಿಸದೆ, ದೇವರು ನಮ್ಮನ್ನು ಪ್ರೀತಿಸುತ್ತಾನೆ, ನಮ್ಮನ್ನು ಕೇವಲ ಪಾಪದ ಬಂಧನದಿಂದ ಮಾತ್ರವಲ್ಲ ನಿತ್ಯಮರಣದಿಂದಲೂ ವಿಮೋಚಿಸಲೂ ಹಂಬಲಿಸುತ್ತಾನೆ.

ಮುಖ್ಯವಾದ ಪ್ರಶ್ನೆ ಯಾವಾಗಲು ಒಂದೇ ಆಗಿರುತ್ತದೆ: ಯೇಸುಕ್ರಿಸ್ತನಲ್ಲಿ ಪ್ರಕಟಗೊಂಡಂತೆ ದೇವರ ವಾಸ್ತವ ಪ್ರೀತಿಗೆ ನಾವು ಹೇಗೆ ಪ್ರತಿಕ್ರಿಯೆ ತೋರಿಸುತ್ತೇವೆ?

ಅನೇಕ ವ್ಯಕ್ತಿಗಳು, ಗುಂಪುಗಳು ನಾವು ನಮ್ಮನ್ನು ನಿಂದಿಸಿಕೊಳ್ಳದೆ ನಮ್ಮನ್ನು ನಾವು ಪ್ರೀತಿಸುತ್ತಾ ಅಂಗೀಕರಿಸಬೇಕೆಂದು ಹೇಳುತ್ತಾರೆ. ಯಾಕೆ ಇದು ಸ್ವಯಂ ವಂಚನೆಯಾಗುತ್ತದೆ? ನಮ್ಮ ಯೋಗ್ಯತೆ ಹೊರಗಿಂದ ಅಂದರೆ ನಮ್ಮ ಸಾಮರ್ಥ್ಯ–

ವನ್ನರಿತ ನಿಮ್ಮ ಸೃಷ್ಟಿಕರ್ತನಿಂದ ಬರುತ್ತದೆ ಎಂದು ತಿಳಿಯುವುದು ಎಷ್ಟು ಮುಖ್ಯವಾಗಿದೆ?

**ಬುಧವಾರ** **ಆಗಸ್ಟ್ 4**

## ದೇವರ ರೀತಿಯಲ್ಲಿ ಸಂಬಂಧ ಬೆಳೆಸುವುದು

ಆರಂಭದಲ್ಲಿ ಯೋಸೇಫನ ಕಥೆಯು ಐಗುಪ್ತದಲ್ಲಿ ಸಕರಾತ್ಮಕವಾದ ತಿರುವಿನಲ್ಲಿರುತ್ತದೆ. ಯೋಸೇಫನು ತನ್ನನ್ನು ತಾನು ದೇವರಿಗೆ ಒಪ್ಪಿಸಿಕೊಂಡಿದ್ದನು ಮತ್ತು ದೇವರು ಯೋಸೇಫನನ್ನು ಆಶೀರ್ವದಿಸುತ್ತಿದ್ದನು. ಆತನು ತಾನು ನೆನಸದ ರೀತಿಯಲ್ಲಿ ಪೋಟಿಪರನ ಮನೆಯಲ್ಲಿ ಎತ್ತರಕ್ಕೆ ಏರಿಸಲ್ಪಟ್ಟನು. ಯಾವ ರೀತಿಯಲ್ಲಿ ಯೋಸೇಫನ ದೈನಂದಿನ ಜೀವಿತದಲ್ಲಿ ದೇವರ ಆಶೀರ್ವಾದಗಳನ್ನು ಕಾಣುತ್ತೇವೆ? ಯೋಸೇಫನ ತನ್ನ ಜೊತೆಯವರೊಂದಿಗೆ ಹೇಗೆ ಸಂಬಂಧವಿಟ್ಟುಕೊಂಡಿದ್ದನು? ಆ.ಕಾಂಡ 39:1–6ನ್ನು ಓದಿರಿ.

ಯೋಸೇಫನ ಪೋಟಿಫರನ ಮನೆಯಲ್ಲಿ ಚೆನ್ನಾಗಿ ಏಳಿಗೆ ಹೊಂದಿದಂತೆ ಮತ್ತು ಆ ಮನೆಯಲ್ಲಿರುವವರ ಜೊತೆ ಮತ್ತು ತೋಟದ ಆಳುಗಳ ಜೊತೆ ಇದ್ದ ಬಾಂಧವ್ಯ ಚೆನ್ನಾಗಿತ್ತು ಎಂದು ಕಂಡರೂ ತೊಂದರೆಯು ಆ ಮನೆಯಲ್ಲಿರುವ ಮತ್ತೊಂದು ಅತೃಪ್ತ ವ್ಯಕ್ತಿಯಿಂದ ಸೃಷ್ಟಿಯಾಗತೊಡಗಿತ್ತು.

ಯಾವ ರೀತಿಯ ಸಂಬಂಧಿಕ ಸಮಸ್ಯೆಯನ್ನು ಯೋಸೇಫನು ಎದುರಿಸುತ್ತಿದ್ದನು? ಆತನು ಅದನ್ನು ಹೇಗೆ ನಿಭಾಯಿಸಲು ಆಯ್ಕೆ ಮಾಡಿಕೊಂಡನು? ಆದಿಕಾಂಡ 39:7–10 ವಚನಗಳನ್ನು ಓದಿರಿ.

ಯೋಸೇಫನಿಗೆ ಪೋಟೀಫರನ ಹೆಂಡತಿಯಿಂದ ತೊಂದರೆಯಿತ್ತು. ಬಹುಶಃ ನಾವು ಇದನ್ನು ಹೀಗೆ ಮಾರ್ಪಡಿಸಿ ಹೇಳಬೇಕು. ಪೋಟಿಫರನ ಹೆಂಡತಿಗೆ ಒಂದು ಸಮಸ್ಯೆಯಿತ್ತು. ಆಕೆಯು ಇತರರನ್ನು ಭೋಗವಸ್ತುಗಳಂತೆ ಕಾಣುತ್ತಿದ್ದಳು. ಆಕೆಗೆ ಯೋಸೇಫನನ್ನು ಭೋಗಿಸಬೇಕೆಂದು ಆಸೆ ಪಡುತ್ತಿದ್ದಳು. ಇದಲ್ಲದೆ ಯೋಸೇಫನು ರೂಪದಲ್ಲಿಯೂ ಮುಖಭಾವದಲ್ಲಿಯೂ ಸುಂದರನಾಗಿದ್ದನು (ಆ.ಕಾಂಡ 39:6). ಸತ್ಯವೇದವು ವ್ಯಕ್ತಿಯ ಬಾಹ್ಯಸೌಂದರ್ಯಕ್ಕೆ ಮಹತ್ವ ನೀಡುವುದಿಲ್ಲ. ಯಾಕೆಂದರೆ ದೇವರು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ (1 ಸಮು 16:7). ಈ ಪ್ರಕರಣದಲ್ಲಿ

ಯೋಸೇಫನ ಸುಂದರ ರೂಪವು ಆತನು ದೇವರ ನೇಮಗಳಲ್ಲಿ ಪರಿಶುದ್ಧತೆಯನ್ನೂ ನಂಬಿಗಸ್ತಿಕೆಯನ್ನು ಹಿಡಿದುಕೊಳ್ಳಲು ಸಹಾಯ ಮಾಡುವುದಕ್ಕಿಂತ ಹೆಚ್ಚು ತೊಂದರೆಗೆ ಎಡೆಮಾಡಿಕೊಟ್ಟಂತೆ ಕಾಣುತ್ತದೆ.

ಈ ದುಷ್ಟ ಹೆಂಗಸಿನ ಒತ್ತಾಯದ ಹೊರತಾಗ್ಯೂ ಅವಳಿಗೆ ಪ್ರತಿರೋಧವಾಗಿ ಕಾಣುವಂಥ ಒಂದನ್ನು ಮಾಡುತ್ತಾನೆ. ಆತನು ಎಲ್ಲಾ ಸಂಬಂಧಗಳಿಗೆ ಸತ್ಯವೇದದ ನಿಯಮಗಳನ್ನು ಅನ್ವಯ ಮಾಡುತ್ತಿದ್ದನು. ಸತ್ಯವೇದದಲ್ಲಿ ಸಂಬಂಧಗಳ ನಿಯಮಗಳು ಎಂದೆಂದಿಗೂ ಹಳತಾಗುವುದಿಲ್ಲ, ಆದರೆ ಹಳತಾಗುತ್ತದೆಯೆಂದು ಪಾಪದ ದೆಸೆಯಿಂದ ಕಷ್ಟಪಡುವವರು ತಪ್ಪಾಗಿ ಹೇಳಬಹುದು. ಸತ್ಯವೇದದಲ್ಲಿ ಹೇಳಿರುವ ವಿವರಣೆಯು ಇದನ್ನು ಒಂದು ಸಲಕ್ಕೆ ಬಾಧಿಸಿದ ಕೇವಲವಾದ ಶೋಧನೆಯಲ್ಲ. ಬಹುಶಃ ಪೋಟಿಫರನ ಹೆಂಡತಿಯು ಯೋಸೇಫನನ್ನು ಮತ್ತೆ ಮತ್ತೆ ಬೆನ್ನಟ್ಟಿದಳು (ಒತ್ತಾಯ ಪಡಿಸಿದಳು) (ಆ.ಕಾಂಡ 39:10). ಯೋಸೇಫನು ತನ್ನ ನಿರ್ಧಾರದ ಹಿಂದೆ ಇರುವ ಉದ್ದೇಶಗಳನ್ನು ಆಕೆಗೆ ವಿವರಿಸಿ ಹೇಳಲು ಪ್ರಯತ್ನಿಸಿದನು (ಆ.ಕಾಂಡ 39:8,9). ಆದರೆ ಇದು ಸಾಧ್ಯವಾದಂತೆ ಕಾಣುವುದಿಲ್ಲ.

ಮತ್ತೊಬ್ಬರ ಆಯ್ಕೆಗಳನ್ನು ತಾನು ನಿಯಂತ್ರಿಸುವುದು ಸಾಧ್ಯವಿಲ್ಲವೆಂದು ಯೋಸೇಫನಿಗೆ ಅರಿವಾಯ್ತು. ಯೋಸೇಫನು ಪ್ರೀತಿಯಿಂದಲೂ, ತನ್ನ ಸುತ್ತಲೂ ಇರುವ ಜನರು ದೇವರನ್ನು ಗೌರವಿಸುವಂತೆ ಅವರೊಡನೆ ನಡೆದುಕೊಳ್ಳಬೇಕೆಂತಲೂ ನಿರ್ಧರಿಸಿದನು. ಯೋಸೇಫನು ದೇವರ ಸಮ್ಮುಖದಲ್ಲಿ ಜೀವಿಸುವುದನ್ನು ಕಲಿತಿದ್ದನು. ಈ ಜ್ಞಾನವು ಅವನಿಗೆ ಶೋಧನೆಯನ್ನು ಗೆಲ್ಲಲು (ಪ್ರತಿರೋಧಿಸಲು) ಸಹಾಯ ಮಾಡಿತು. ಬೇರೆಯವರು ನಿಮ್ಮ ಜೊತೆ ಸರಿಯಾದ ರೀತಿಯಲ್ಲಿ ವರ್ತಿಸದಿದ್ದರೂ ನೀವು ನಿಮ್ಮ ಎಲ್ಲಾ ಸಂಬಂಧಗಳಿಗೆ ಸತ್ಯವೇದಾರಿತ ನಿಯಮಗಳನ್ನು ಅನ್ವಯ ಮಾಡಲು ಪ್ರಯತ್ನಿಸುವಿರಾ? ಅದು ಹೇಗೆ ಕೆಲಸ ಮಾಡಿತು? ಮತ್ತಾಯ 5:43–48ನ್ನು ಓದಿರಿ. ಹೀಗೆ ಜೀವಿಸುವುದು ಮುಖ್ಯವಾಗಿದೆ ಏಕೆ?

**ಗುರುವಾರ** **ಆಗಸ್ಟ್ 5**

## ಮಹಾಹೋರಾಟ, ಇನ್ನೂ ಸಮೀಪ ಮತ್ತು ವೈಯಕ್ತಿಕ

ನಾವು ಕಥೆಯನ್ನು ಓದಿದಾಗ (ಆ.ಕಾಂಡ 39:11–20). ಯೋಸೇಫನು ತನ್ನ ಶಿಸ್ತಿನ ನಿರ್ಧಾರದಿಂದ ಕಷ್ಟಕ್ಕೊಳಗಾದನು. ಯೋಸೇಫನು ಸೆರಮನೆಗೆ ಹಾಕಲ್ಪಟ್ಟನು.

ಯೋಸೇಫನು ಪೋಟಿಫರನ ಸ್ವತ್ತಾಗಿರಲು ಆತನನ್ನು ಸ್ಥಳದಲ್ಲೇ ಕೊಲ್ಲಬಹುದಾಗಿತ್ತು. ಆತನು ಯಾವ ಪ್ರಶ್ನೆಗಳನ್ನೂ ಕೇಳಲಿಲ್ಲ. ಪೋಟಿಫರನು ವಿಷಯವನ್ನು ಗ್ರಹಿಸಿಕೊಂಡವನಾಗಿ ತನ್ನ ಹೆಂಡತಿಯನ್ನು ನಂಬಲಿಲ್ಲ. ಆದರೆ ಆತನು ತನ್ನ ಗೌರವವನ್ನು ಕಾಪಾಡಿಕೊಳ್ಳಲು ಈ ಕ್ರಮವನ್ನು ಜರುಗಿಸಿದನು. ಆದಾಗ್ಯೂ ಈ ಭಯಂಕರ ಸನ್ನಿವೇಶದಲ್ಲಿಯೂ "ದೇವರು ಯೋಸೇಫನ ಜೊತೆ ಇದ್ದನು" ಎಂದು ವಾಕ್ಯವು ಹೇಳುತ್ತದೆ (ಆ.ಕಾಂಡ 39:21).

ಈ ಭೂಮಿಯ ಮೇಲೆ ನಡೆಯುತ್ತಿರುವ ಜೀವನ ಚೆನ್ನಾಗಿಲ್ಲ. ಒಳ್ಳೆಯದಕ್ಕೆ ಯಾವಾಗಲೂ ಮಾನ್ಯತೆ ಸಿಗಲಾರದು. ಹಾಗೆಯೇ ಕೆಟ್ಟದಕ್ಕೆ ಕೂಡಲೇ ಶಿಕ್ಷೆಯೂ ಆಗದು.

ಒಂದು ಒಳ್ಳೆಯ ಸಮಾಚಾರವೇನೆಂದರೆ ದೇವರು ಆತನ ಸಂಗಡವಿದ್ದುದರಿಂದ ಸೆರೆಮನೆಯಲ್ಲಿಯೂ ಆತನಿಗೆ ವಿಶ್ರಾಂತಿ (ಸಮಾಧಾನ) ಸಿಕ್ಕಿತು. ಸೆರೆಮನೆಯಲ್ಲಿ ತನಗೊದಗಿದ ಅನ್ಯಾಯದ ಸನ್ನಿವೇಶದ ಬಗ್ಗೆ ಧ್ಯಾನಮಾಡಬಹುದಾಗಿತ್ತು. ಇಲ್ಲವೇ ಅದನ್ನು ಮರೆತು ಎಲ್ಲವನ್ನೂ ದೇವರಿಗೆ ಬಿಡಬಹುದಾಗಿತ್ತು.

ಸೆರೆಮನೆಯಲ್ಲಿರುವಾಗ ಯೋಸೇಫನು ಏನು ಮಾಡುತ್ತಿದ್ದನು? ತನ್ನ ಸುತ್ತಲಿದ್ದವರ ಜೊತೆ ಹೇಗೆ ಸಂಬಂಧ ಹೊಂದಿದ್ದನು? (ಆದಿಕಾಂಡ 39:21–40,42ನ್ನು ಓದಿರಿ).

ಸೆರೆಮನೆಯಲ್ಲಿ ಯೋಸೇಫನು ಕೇವಲ ಆದರ್ಶವನ್ನಿಟ್ಟುಕೊಂಡು ಸುಮ್ಮನಿರಲಿಲ್ಲ. ವಾಸ್ತವಕ್ಕೆ ಹತ್ತಿರವಾಗಿ ನಡೆದುಕೊಂಡನು. ಆತನು ಇದ್ದ ಕಡೆ ಜನಸಂಪರ್ಕವಿತ್ತು. ಆತನು ಇತರರಿಗೆ ಸಹಾಯ ಮಾಡುತ್ತಿದ್ದನು, ಸೆರೆಮನೆಯಲ್ಲಿ ಸಂಬಂಧಗಳು ಇಷ್ಟವಾಗುವಷ್ಟು ಒಳ್ಳೆಯದಾಗಿರಲಿಲ್ಲ. ಯೋಸೇಫನು ಸಹಾ ಸಹಾಯ ಕೇಳದೆ ತನ್ನ ಜೀವಿತವನ್ನು ಕಷ್ಟಕ್ಕೆ ಸಿಕ್ಕಿಹಾಕಿಸಿಕೊಳ್ಳದೆ ಇರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದುದರಿಂದ ಆತನೂ ಸಹಾ ಕನಸಿನ ಅರ್ಥವನ್ನು ಹೇಳಿಸಿಕೊಂಡ ಜೊತೆ ಸೆರೆಯವನಾದ ಪಾನದಾಯಕನ ಸಹಾಯವನ್ನು ಕೇಳಿಕೊಂಡನು.

ಎಫೆಸ 6:1–13ರಲ್ಲಿ ಪೌಲನು ಸಂಬಂಧಗಳ ವಿಷಯದಲ್ಲಿ ಎಂತಹ ಯಥಾ ದೃಷ್ಟಿಯ ದೊಡ್ಡ ಚಿತ್ರವನ್ನು ಕೊಟ್ಟಿದ್ದಾನೆ?

ನಮ್ಮ ಸಂಬಂಧಗಳು ಒಂದು ರೀತಿಯಲ್ಲಿ ದೇವರಿಗೂ ಸೈತಾನನಿಗೂ ಇರುವ ಮಹಾಹೋರಾಟವು ಬಿಂಬಿಸುವ ಸಣ್ಣ ಸಣ್ಣ ಹೋರಾಟಗಳ ಮಾದರಿಯಾಗಿವೆ. ಪರಿಪೂರ್ಣವಾದ ಸಂಬಂಧಗಳು ಇಲ್ಲವೆಂದು ಇದರರ್ಥ. ಎಲ್ಲಾ ಸಂಬಂಧಗಳು ಚೈತನ್ಯಶೀಲ ಹೊಂದಬೇಕಾಗಿತ್ತು, ನಮ್ಮ ಸಂಬಂಧಗಳಲ್ಲಿ ಸೈತಾನನು ತನ್ನ ಮೂಗು ತೂರಿಸುತ್ತಾನೆ (ಸ್ವಯಂ ಆಸಕ್ತಿ ಇಟ್ಟುಕೊಂಡು) ಅದರಲ್ಲೂ ನಮಗೆ ಬಹಳ ಹತ್ತಿರದ ಸಂಬಂಧಗಳಲ್ಲಿ ತನ್ನ ಅನುಕೂಲಕ್ಕೆ ತಕ್ಕಂತೆ ದೇವರಚಿತ್ತವು ನಮ್ಮನ್ನು ನೋಯಿಸುವಂತೆಯೂ ಅದರಿಂದ ನಮಗೆ ಬೇಸರವಾಗುವಂತೆಯೂ ಮಾಡುತ್ತಾನೆ. ನಾವು ಮಾಡುವ ಹೋರಾಟದಲ್ಲಿ ನಾವು ಏಕಾಂಗಿಯಾಗಿಲ್ಲ. ಆದುದರಿಂದ ಕೃತಜ್ಞರಾಗಿರೋಣ.

ದೇವರ ವಾಕ್ಯವು ನಮ್ಮ ಸಂಬಂಧಗಳಿಗೆ ನಿಯಮಗಳನ್ನು ವಿಧಿಸುತ್ತದೆ. ಆತನು ನಮಗೆ ಜ್ಞಾನವನ್ನು ಕೊಡುತ್ತೇನೆಂದು ವಾಗ್ದಾನ ಮಾಡಿದ್ದಾನೆ (ಯಾಕೋಬ 1:5) ಮತ್ತು ನಮ್ಮ ಸಂಬಂಧಗಳನ್ನು ವಿಸ್ತರಿಸುತ್ತಾನೆ. ಆತನು ಯೋಸೇಫನ ಸಂಗಡವಿದ್ದಂತೆ, ನಮ್ಮ ಸಂಬಂಧಗಳು ಬಹಳ ಜಟಿಲವಾಗಿ ಪರಿಣಮಿಸುವಾಗ ಆತನು ನಮ್ಮ ಸಂಗಡವೂ ಇರುತ್ತೇನೆಂದು ವಾಗ್ದಾನ ಮಾಡಿದ್ದಾನೆ.

ಯಾಕೋಬ 1:5ನೇ ವಾಕ್ಯದಲ್ಲಿ ಮಾಡಿರುವ ವಾಗ್ದಾನದ ಬಗ್ಗೆ ಆಲೋಚಿಸಿರಿ. ಸಂಬಂಧಗಳಿಗೋಸ್ಕರ ಕ್ಷಣ ಹೊತ್ತು ಪ್ರಾರ್ಥಿಸಿರಿ. ಜನರ ಜೊತೆ ಸಂಬಂಧ ಹೊಂದಿರಬೇಕಾದ ನಾವು ಹೇಗೆ ಆತ್ಮನ ಪ್ರೇರಣೆಗೆ ತೆರೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ?

**ಶುಕ್ರವಾರ** **ಆಗಸ್ಟ್ 6**

**ಹೆಚ್ಚಿನ ಚಿಂತನೆ :** ಪೋಟೀಫರನ ಹೆಂಡತಿಯ ಜೊತೆ ಯೋಸೇಫನಿಗೆ ಏನಾಯ್ತು ಎಂಬ ಸಂದರ್ಭವನ್ನು ಎಲೆನ್ ಜಿ ವೈಟಮ್ಮನವರು ಹೀಗೆ ಬರೆಯುತ್ತಾರೆ: ಇಲ್ಲಿ ಲೋಕದ ಎಲ್ಲಾ ಸಂತತಿಗಳು ಹೇಗೆ ಜೀವಿಸಬೇಕೆಂಬ ಉದಾಹರಣೆಯಿದೆ.... ದೇವರು ಯಾವಾಗಲೂ ತಕ್ಷಣ ಒದಗುವ ಸಹಾಯಕನಾಗಿದ್ದಾನೆ ಮತ್ತು ಆತನ ಆತ್ಮನು ನಮಗೆ ಭದ್ರಕವಚವಾಗಿದ್ದಾನೆ. ನಮ್ಮ ಸುತ್ತ ನಮಗಿರುವ ಶೋಧನೆಗಳು ಬಹಳ ತೀಕ್ಷ್ಣವಾದವುಗಳಾಗಿದ್ದರೂ ಅವುಗಳನ್ನು ಪ್ರತಿರೋಧಿಸುವಂತೆ ಒದಗುವ ಶಕ್ತಿಯಮೂಲವನ್ನೂ ಉಪಯೋಗಿಸಬೇಕು. ಯೋಸೇಫನ ನೀತಿಗೆ ಎಂಥಾ

ಭೀಕರವಾದ ಆಕ್ರಮಣವಾಯಿತು. ಅದು ಒಂದು ಪ್ರಭಾವೀಶಕ್ತಿಯಾಗಿ ಆತನನ್ನು ಮಾರ್ಗ ತಪ್ಪಿಸುವ ಸಲುವಾಗಿ ಎರಗಿ ಬಂತು. ಆದಾಗ್ಯೂ ಎಷ್ಟು ಪ್ರಾಮಾಣಿಕವಾಗಿ ಮತ್ತು ದೃಢವಾಗಿ ಅದನ್ನು ವಿರೋಧಿಸಲಾಯ್ತು. ಆತನು ತನ್ನ ಮಾನವನ್ನು ಹಿತಾಸಕ್ತಿಯನ್ನು ದೇವರ ಕೈಗೆ ಕೊಟ್ಟನು. ಆತನು ಒಂದು ಸಮಯದಲ್ಲಿ ಬಾಧಿತನಾಗಿ ಕಂಡುಬಂದರೂ, ಆತನನ್ನು ಮುಖ್ಯವಾದ ಸ್ಥಾನಕ್ಕೆ ಸಿದ್ಧಪಡಿಸುತ್ತಿದ್ದ ದೇವರು ದುಷ್ಟ ಆರೋಪಿಯಿಂದ ಕಳಂಕಿತವಾಗಿದ್ದ ಅವನ ಮಾನವನ್ನು ಜೋಪಾನವಾಗಿ ಕಾಪಾಡಿದ್ದನು; ಮುಂದೆ ಒಂದು ಒಳ್ಳೆಯ ದಿನ ಹೊಳೆಯುವಂತೆ ಮಾಡಿದ್ದನು. ದೇವರು ಸೆರೆಮನೆಯನ್ನು ಸಹ ಆತನು ಎತ್ತರಕ್ಕೆ ಏರುವುದಕ್ಕೆ ಮಾರ್ಗವನ್ನಾಗಿ ಮಾಡಿದನು. ಉತ್ತಮವಾದ ಗುಣ (ಸದ್ಗುಣ) ತನ್ನ ಪ್ರತಿಫಲವನ್ನು ಕೊಟ್ಟೇ ಕೊಡುತ್ತದೆ.

ಯೋಸೇಫನ ಹೃದಯವನ್ನು ರಕ್ಷಿಸಿದ ಭದ್ರಕವಚವು, ಆತನಿಗೆ ದೇವರ ಮೇಲಿದ್ದ ಭಯವೇ ಆಗಿತ್ತು. ಅದು ಅವನನ್ನು ಅವನ ಯಜಮಾನನಿಗೆ ನಂಬಿಗಸ್ತನನ್ನಾಗಿಯೂ ನ್ಯಾಯವಂತವಾಗಿಯೂ ಇರುವಂತೆ ಮಾಡಿತು, ದೇವರಿಗೆ ಪ್ರಾಮಾಣಿಕನಾಗಿರುವಂತೆ ಮಾಡಿತು. ಯಜಮಾನನಿಗೆ ಸತ್ಯಸಂಗತಿ ಗೊತ್ತಿರಲಿ ಇಲ್ಲದಿರಲಿ ಆತನು ತನ್ನ ಯಜಮಾನನ ವಿಶ್ವಾಸಕ್ಕೆ ದ್ರೋಹ ಬಗೆಯುವ ಅಪಕಾರವನ್ನು ಮಾತ್ರ ಮಾಡಲಿಲ್ಲ"– ಎಲೆನ್ ಜಿ ವೈಟಮ್ಮನವರ ದಿ ಸ್ಪಿರಿಟ್ ಆಫ್ ಪ್ರೊಫೆಸಿ, 1ನೇ ಸಂಪುಟ, 132ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಹೆಸರಿಗೆ ಕ್ರೈಸ್ತರಾಗದವರು ಇಲ್ಲವೇ ಸಾಂಸ್ಕೃತಿಕ ಅಡ್ವೆಂಟಿಸ್ಟರು ಸಂಬಂಧಗಳಲ್ಲಿ ವಿಶ್ರಾಂತಿಯನ್ನು ಕಂಡುಕೊಳ್ಳುವಲ್ಲಿ ನಮಗೆ ಸಹಾಯ ಮಾಡಲಾರರು. ಸಾಂಸ್ಕೃತಿಕ ಅಡ್ವೆಂಟಿಸ್ಟರಿಗೂ, ನಿಜವಾದ ವಿಶ್ವಾಸಿಗಳಿಗೂ ಇರುವ ವ್ಯತ್ಯಾಸಗಳೇನು?

2. ಸೋದರಿ 'x' ಎಂಬುವವರು ಸಭೆಯನ್ನು ಸೇರಿಕೊಂಡರು. ಆಕೆಯ ಅವಿಶ್ವಾಸಿಯೊಬ್ಬನನ್ನು ಮದುವೆಯಾಗಿದ್ದಾರೆ. ಆಕೆಯು ತನ್ನ ಗಂಡನನ್ನು ಪ್ರೀತಿಸುತ್ತಾಳೆ. ಆದರೆ ಆತನು ಆಕೆಯಲ್ಲಿ ಬದಲಾವಣೆಗಳನ್ನು ಕಂಡು ಅವನು ಅವಳನ್ನು ಪ್ರೀತಿಸುತ್ತಿಲ್ಲ. ಈ ಸೋದರಿಗೆ ಸತ್ಯವೇದಾನುಸಾರ ನೀವು ಏನು

ಬುದ್ಧಿ ಮಾತು ಹೇಳುವಿರಿ?

3. ರಷ್ಯ ಲೇಖಕ ಲಿಂಯೋಟಾಲ್‌ಸ್ಟಾಂಯ್ ಹೀಗೆ ಬರೆಯುತ್ತಾರೆ: "ಸಂತೋಷವಾಗಿರುವ, ಎಲ್ಲಾ ಕುಟುಂಬಗಳ ಒಂದೇ ರೀತಿಯವು ಸಂತೋಷವಿಲ್ಲದಿರುವ ಪ್ರತಿ ಕುಟುಂಬಗಳು ತಮ್ಮದೇ ಆದ ರೀತಿಯಲ್ಲಿ ಹಾಗೆ ಇರುತ್ತವೆ" ಎಲ್ಲಾ ಕುಟುಂಬಗಳು ಒಂದಲ್ಲ ಒಂದು ಕಾರಣದಿಂದ ತೊಂದರೆಯಲ್ಲಿರುತ್ತವೆ. ಯಾಕೆಂದರೆ ಎಲ್ಲಾ ಕುಟುಂಬಗಳು ಪಾಪಿಗಳಿಂದ ಮಾಡಲ್ಪಟ್ಟಿವೆ. ಇಲ್ಲಿ ಪ್ರತಿಯೊಬ್ಬರೂ ತಮ್ಮದೇ ಆದ ತೊಂದರೆಗಳನ್ನು ಕುಟುಂಬಕ್ಕೆ ತಂದುಹಾಕುತ್ತಾರೆ. ನಮ್ಮಲ್ಲಿ ಪ್ರತಿಯೊಬ್ಬರೂ ದೇವರ ಕೃಪೆಯಿಂದ ಸತ್ಯವೇದ ನಿಯಮಗಳಾದ ಪ್ರೀತಿ, ಕ್ಷಮೆ, ಮತ್ತೊಬ್ಬರ ಹೊರೆ ಹೊರುವುದು. ಇತ್ಯಾದಿ ಇವುಗಳನ್ನು ಅನುಸರಿಸಿ ನಮ್ಮ ಕೌಟುಂಬಿಕ ಸಂಬಂಧಗಳನ್ನು ಸುಧಾರಿಸಿಕೊಳ್ಳಬಹುದು ಹೇಗೆ?

4. ಎಷ್ಟೋ ಜನರು ತಮ್ಮ ಜೀವಿತದಲ್ಲಿ ಮತ್ತು ಕುಟುಂಬದಲ್ಲಿ ಎಲ್ಲವೂ ಚೆನ್ನಾಗಿ ನಡೆದುಕೊಂಡು ಹೋಗುವುದನ್ನು ಅನುಭವಿಸುತ್ತಿರುತ್ತಾರೆ, ಇದ್ದಕ್ಕಿದ್ದಂತೆಯೇ ಅನಿರೀಕ್ಷಿತವಾಗಿ ದುರಂತಗಳು ಸಂಭವಿಸಿಬಿಡುತ್ತವೆ. ಅಂತಹ ಸಂದರ್ಭಗಳಲ್ಲಿ ದೇವರ ವಾಕ್ಯಾನುಸಾರ ನಂಬಿಕೆಗೆ ಅಂಟಿಕೊಳ್ಳುವುದು, ವಾಗ್ದಾನಗಳಿಗೆ ಅಂಟಿಕೊಳ್ಳುವುದು ಎಷ್ಟು ಮುಖ್ಯವಲ್ಲವೇ? ವಿಶೇಷವಾಗಿ ಒಳ್ಳೆಯ ಕಾಲದಲ್ಲಿರುವಾಗ, ಮುಂದಿನ ಕೆಟ್ಟ ಸಂದರ್ಭಗಳಿಗೆ ಆಧ್ಯಾತ್ಮಿಕವಾಗಿ ಸಿದ್ಧ ಮಾಡಿಕೊಳ್ಳುವುದು ಮುಖ್ಯವಾಗಿರುತ್ತದೆ ಯಾಕೆ?